

ಆಪ್ಟಿಮೈಸ್ ಮಾಡುವುದನ್ನು ಅಭ್ಯಾಸ ಮಾಡಿಕೊಂಡಿರುವ ಚಂದ್ರಹಾಸ, ಗ್ಲೋಬಲ್ ಗಿರಾಕಿಗಳನ್ನು ಕೂಡಾ ಕಬ್ಬಿನಹಳ್ಳಿ ಹೋಮ್‌ಸ್ಟೇಗೆ ಸೆಳೆಯಲು ಪ್ರಯತ್ನಪಡುತ್ತಿರುತ್ತಾನೆ. ಒಮ್ಮೆಯಂತೂ ಸ್ವೀಡನ್ನಿನಿಂದ ಬೆಂಗಳೂರಿಗೆ ಬಂದಿದ್ದ ಒಂದು ಫಾರಿನರ್ಸ್ ಜೋಡಿಯನ್ನು ಕಬ್ಬಿನಹಳ್ಳಿಗೆ ಬರಲು ಕನ್ವಿನ್ಸ್ ಮಾಡಿ, ಇತಿಹಾಸದಲ್ಲೇ ದೊಡ್ಡ ಸಾಧನೆ ಮೆರೆದಿದ್ದ.

ಸಾಮಾನ್ಯವಾಗಿ ಬುಧವಾರದಿಂದಲೇ ಮೊಬೈಲಿನಲ್ಲಿ ಪ್ರಶ್ನೆಗಳು ಆರಂಭವಾಗುವುದು. ಏನಿದೆ ನಿಮ್ ಹೋಮ್‌ಸ್ಟೇನಲ್ಲಿ? ಸ್ವಿಮಿಂಗ್ ಪೂಲ್ ಉಂಟಾ? ಪ್ಲೇ ಏರಿಯಾ ಇದೆಯಾ? ಮಸಾಜು? ಪಾರ್ಟಿ ಹಾಲು? ಅಟ್ಯಾಚ್ಡ್ ಬಾರು? ಬಫೇನಾ? ವೆಜ್ಜು–ನಾನ್ವೆಜ್ಜು ಕಿಚನ್ ಒಂದೇನಾ? ಹತ್ತಿರದಲ್ಲಿ ಟೂರಿಂಗ್ ಸ್ಪಾಟ್ಸ್ ಯಾವುದಿವೆ? ಸಿಟೌಟಿನಿಂದ ವ್ಯೂ ಸಿಗತ್ತಾ? ಮುಳ್ಳಯ್ಯನಗಿರಿ ಎಷ್ಟು ದೂರ? ಸನ್ ಸೆಟ್ ಗ್ಯಾರಂಟಿ ಸಿಗುತ್ತಾ? ಅಲ್ಲಿ ಎಷ್ಟು ಸ್ಟೆಪ್ಸ್ ಟ್ರೆಕಿಂಗ್ ಮಾಡ್ಬೇಕು? ಬಾಬಾಬುಡನ್ ಗಿರಿ ರಶ್ ಇದೆಯಾ? ಮೇನ್ ರೋಡಿನಿಂದ ಡೀಪ್ ಇದೆ ತಾನೇ? ಮೂಡಿಗೆರೆಗೆ ಹೋಗಿ ಬರಬಹುದಾ? ಎತ್ತಿನ ಭುಜ ಅಂತ ಯಾಕೆ ಕರೀತಾರೆ? ಮಳೆ ಇದೆಯಾ? ಕುರುಂಜಿ ಹೂ ಬಿಟ್ಟದೆಯಾ? ಡ್ರೈವರಿಗೆ ಮಲಗೋಕೆ ಜಾಗ ಇದೆಯಾ? ಒಮ್ಮೆ ಬಂದ ಪ್ರಶ್ನೆ ಇನ್ನೊಮ್ಮೆ ಬರುತ್ತಿರಲಿಲ್ಲ. ಶೇಷಾಚಲನಿಗೂ, ಚಂದ್ರಹಾಸನಿಗೂ ಸಾವಧಾನವಾಗಿ ಉತ್ತರಿಸುತ್ತ, ಗಿರಾಕಿಗಳನ್ನು ಸೆಳೆಯುವಷ್ಟರಲ್ಲಿ ಸಾಕಾಗುತ್ತಿತ್ತು. ಒಂದು ಕುಟುಂಬ ಪ್ರವಾಸದ ಇಡೀ ಜೈವಿಕ ಲಯವು ಚೂರೂ ಕೆಡದಂತೆ ಅದನ್ನು ಇಡಿಯಾಗಿ ತನ್ನ ವ್ಯಾಪಾರದ ವಲಯದೊಳಗೆ ಸೆಳೆಯಲು ಇರಬೇಕಾದ ಚಾಕಚಕ್ಯತೆ, ಸಹನೆ, ಸಾಮಾನ್ಯ ಜ್ಞಾನಗಳು ಅಪ್ಪ ಮಗನಿಗೆ ರಕ್ತದಲ್ಲೇ ಇವೆ ಎನ್ನುವ ಹಾಗಿರುತ್ತಿತ್ತು ಫೋನಿನಲ್ಲಿನ ಅವರ ವರ್ತನೆ. ಅದೆಷ್ಟು ಆದರಾತಿಥ್ಯದ ಮನಸ್ಥಿತಿ ಇದೆ ಅವರಲ್ಲಿ ಎಂಬ ಭಾವತರಂಗಗಳು ಮೊಬೈಲ್ ಮೂಲಕ ಗಿರಾಕಿಯ ಮನೋಮಂಡಲವನ್ನು ತಲುಪುವವರೆಗೆ ಅಪ್ಪ–ಮಗ ವಿರಮಿಸುತ್ತಿರಲಿಲ್ಲ. ಎಲ್ಲ ಪ್ರಶ್ನೆಗಳ ಬಳಿಕ ಯಾವನೋ ಗಿರಾಕಿ, ಅಲ್ಲಿಂದ ಕನ್ಫರ್ಮ್ ಮಾಡಿ ಒಂದು ಸಾವಿರ ಟ್ರಾನ್ಸ್‌ಫರ್ ಮಾಡಿದ ಕೂಡಲೇ ಶೇಷಾಚಲನಲ್ಲಿ ಅಲ್ಲಿಯವರೆಗೆ ಮಡುಗಟ್ಟಿರುತ್ತಿದ್ದ ಸಿಟ್ಟಿನ ಕಟ್ಟೆಯೊಡೆದುಬಿಡುತ್ತಿತ್ತು. ಬಹುಪಾಲು ಜನ ಫುಲ್ ದುಡ್ಡು ಡೆಪಾಸಿಟ್ ಮಾಡಿ ಅಂದರೆ, 'ಅಲ್ಲಿಗೆ ಬಂದ ಮೇಲೆ ಮಾಡ್ತೇನೆ' ಅನ್ನುತ್ತಿದ್ದರು. ಶನಿವಾರ, ಭಾನುವಾರ ಎರಡು ದಿನ ಬ್ಲಾಕ್ ಮಾಡಿ ಎಂದು ಸೋಮವಾರ ಹನ್ನೊಂದಕ್ಕೆ ಚೆಕೌಟು ಎನ್ನುವುದನ್ನೂ ಕೇಳಿಸಿಕೊಳ್ಳದೇ ಫೋನು ಕುಕ್ಕಿದ ಕ್ಷಣ, 'ಬರಲಿ ಬಡ್ಡೀಮಕ್ಕಳು, ಸರಿಯಾಗಿ ಮಾಡ್ತೀನಿ' ಎಂದುಕೊಳ್ಳುವಾಗ ಅವನ ಹೃದಯದ ಬಡಿತ ಅವನಿಗೇ ಕೇಳುವ ಹಾಗಾಗಿ ಶ್ರೀನಿವಾಸನ ಕಿವಿಗಳು ಬಿಸಿಯಾಗಿ ಹೋಗುತ್ತಿದ್ದವು. ಅದಕ್ಕೇ ಅವನು ಗೆಸ್ಟ್‌ಗಳು ಬಂದಾಗ, ಎಷ್ಟೋ ಬಾರಿ ಹಿರೇಕೊಳಲೆ ಲೇಕ್ ಹತ್ತಿರ ಹೋಗಿ ಸುಮ್ಮನೇ ಕುಳಿತುಬಿಡುತ್ತಿದ್ದ.

'ಟೂರ್ ಬರೋದು ಎಲ್ಲಾ ಮರೆಯಕ್ಕೆ ಶೇಷಿ. ಚೇಂಜ್ ಬೇಕು ಅಂತ ಅಂದುಕೊಳ್ಳೋದು, ಈ ಇರೋದನ್ನ ಉಪೇಕ್ಷಿಸೋದು ಇದೆಯಲ್ಲಾ. ಅದೊಂದು ತರಹ ದಾರಿದ್ರ್ಯ ಕಣಪ್ಪಾ. ಅದು ಒಂದು ತರಹದ ಅನಾಥ ಯಾಚನೆ. ಈ ಸಿಟಿ ಜನರಲ್ಲಿ ಅದು ಜಾಸ್ತಿ ಇರತ್ತೆ. ನಿನ್ನ ಹೋಮ್ ಸ್ಟೇಗೆ ಬರೋರಿಗೆಲ್ಲಾ ದಿನದ ಮೂರು ಭರ್ಜರಿ ಊಟ ಗ್ಯಾರಂಟಿಯಾಗಿರುತ್ತೆ. ಹಸಿವು ನೀಗಿತು ಅಂದಾಗ ಮನುಷ್ಯನಿಗೆ ಹತಾಶೆ ಶುರುವಾಗತ್ತೆ. ನಾಳೆಯ ಕುರಿತಾದ, ನಿನ್ನೆಯ ಕುರಿತಾದ ಹತಾಶೆ ಅದು. ಹಾಗೆ ಆರಂಭವಾದ ಮಾನಸಿಕ ವ್ಯಥೆಗೆ ಹೆದರಿಕೊಂಡು ಇಲ್ಲಿಗೆ ಬರೋರಿಗೆ ರಿಯಾಲಿಟಿ ಕಷ್ಟ ಆಗಿರತ್ತೆ. ಬೇರೆ ವೇದಿಕೇನೇ ಅವರಿಗೆ ಸಿಕ್ಕಿರಲ್ಲ, ಅದೇ ಆಫೀಸು, ಅದೇ ಟ್ರಾಫಿಕ್ಕು, ಅದೇ ಕಂಪ್ಯೂಟರು. ಅವರಿಗೆ ನೀನು ನೀಡಬೇಕಾಗಿರೋದು ಅಸಹನೆ ಅಲ್ಲ ಕಣಪ್ಪಾ, ಅನುಕಂಪ' ಎಂದು ಶೇಷಾಚಲನ ಹತ್ತಿರ ಸುಬ್ಬರಾಯ ಮಾತನಾಡುತ್ತಿದ್ದ. ಬಾಲ್ಯದ ಗೆಳೆಯ ಸುಬ್ಬರಾಯ. ಅವರಪ್ಪನ ಕಾಲದಿಂದಲೂ ಚಿಕ್ಕಮಗಳೂರಿನ ಐಜಿ ರಸ್ತೆಯಲ್ಲಿ ಮೂಕಾಂಬಿಕಾ ಕಾಫಿ ವರ್ಕ್ಸ್ ಇಟ್ಟುಕೊಂಡಿದ್ದು, ಅನಾದಿ ಕಾಲದಲ್ಲೇ ಮಗನಿಗೊಪ್ಪಿಸಿ ನಿವೃತ್ತನಾದವನು. ಹೆಂಡ್ತಿ ಸುಶೀಲ ಕಳೆದ ವರ್ಷ ಹೋದ ಕಾರಣ, ಸದ್ಯ ಮಗನ ಜೊತೆ ವಾಸ.

ಶೇಷಾಚಲ ತನ್ನ ಕಾಫಿ ಪ್ಲಾಂಟೇಷನ್ ಶುರುವಾದಾಗಿನಿಂದಲೂ ಅವನ ತೋಟದ ಕಾಫಿ ಬೀಜಗಳನ್ನು ಸುಬ್ಬರಾಯನ ಫ್ಯಾಕ್ಟರಿಗೇ ಮಾರಿದ್ದಾನೆ. ಅವನು ನೀಡುತ್ತಿದ್ದ ಬೀಜಗಳನ್ನು ಕುಟ್ಟಿ, ವಿಂಗಡಿಸಿ, ಹುರಿದು ಚಿಕೋರಿ ಸೇರಿಸಿ ಕಾಫಿಪುಡಿ ಮಾಡಿ ಮಾರಿ ಶೇಷಾಚಲನಿಗೆ ಆ ಕಾಲದಲ್ಲಿಯೇ ಒಂದು ಶಾಶ್ವತವಾದ ಆದಾಯ ನೀಡಿದವನು ಸುಬ್ಬರಾಯ. ಶೇಷಾಚಲನಂತಹವರು ಅವನಿಗೆ ಹತ್ತಾರಾದರೂ ಇವನ ಬಗ್ಗೆ ವಿಶೇಷ ಮಮತೆ. ಆಗಿನ ಕಾಲಕ್ಕೇ ಚಿಕ್ಕ ಕಾಫಿ ಬೀಜಕ್ಕೆ ಒಂದು ರೇಟು, ದೊಡ್ಡದಕ್ಕೆ ಮತ್ತೊಂದೆಂದು ತಿಳಿಹೇಳಿ ಅವನಿಗೆ ಭರವಸೆ ನೀಡಿದವನು ಅವನು. ಕಾಫಿ ಪ್ಲಾಂಟರ್ಸ್ ಅಸೋಸಿಯೇಷನ್ನಿನಲ್ಲೂ